ದಿನಾಂಕ 14.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ- ಶ್ರೀ.ಐ.ಆರ್.ಪಿ. ವಕೀಲರಿಂದಃ-**

ನಾನು ಈ ದಾವೆಯಲ್ಲಿ ವಾದಿ ಪರ ಸಾಕ್ಷಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿದೆ.

ದಿಃ 30.05.2013 ರಂದು ನೋಂದಾಯಿಸಲಾದ ಮರಣಶಾಸನ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.13 ಎಂದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.13(ಎ) ಎಂದು ಗುರುತಿಸಲಾಯಿತು. ಶ್ರೀಮತಿ ಕೋಡಿಮಣಿಯಂಡ ಬನ್ನಿ ಚಂಗಪ್ಪರವರು ನಿ.ಪಿ. 13 ದಾಖಲೆಗೆ ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ. ಸದರಿಯವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.13(ಬಿ) ಯಿಂದ ನಿ.ಪಿ.13(ಜಿ)ಎಂದು ಗುರುತಿಸಲಾಯಿತು. ನಿಪಿ. 13 ದಾಖಲೆಗೆ ನನ್ನ ಸಮಕ್ಷಮ ಆರ್. ಲತಾ ಮತ್ತು ವೈಲೆಟ್ ವಿಲಿಯಮ್ಸ್ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸದರಿಯವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.13(ಹೆಚ್) ಮತ್ತು ನಿ.ಪಿ.13(ಐ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಶ್ರೀ.ಸಿ.ಎಸ್.ಎಂ. ವಕೀಲರಿಂದಃ**

ನಾನು 2003 ರಿಂದ ಬೆಂಗಳೂರಿನಲ್ಲಿ ವಕೀಲ ವೃತ್ತಿಯನ್ನು ಮಾಡುತ್ತಿದ್ದೆನು. ಶ್ರೀಮತಿ ಕೋಡಿಮಣಿಯಂಡ ಬನ್ನಿ ಚಂಗಪ್ಪರವರು ನನಗೆ 1996 ರಿಂದ ಪರಿಚಯವಿದ್ದರು. ನಾನು

ನಿಶಾನೆ ಪಿ. 13 ದಾಖಲೆಯನ್ನು ತಯಾರಿಸುವುದಕ್ಕಿಂತ ಪೂರ್ವದಲ್ಲಿ ಮರಣಶಾಸನ ಪತ್ರದ ಎ ಅನುಸೂಚಿ ಸ್ವತ್ತುಗಳ ಕಂದಾಯ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಯಾವ ಕಂದಾಯ ದಾಖಲೆಗಳನ್ನು ಪರಿಶೀಲಿಸಿದ್ದೆನು ಎಂಬುದು ನನಗೀಗ ನೆನಪಿಲ್ಲ. ಮರಣಶಾಸನ ಪತ್ರದ ಎ ಶೆಡ್ಯೂಲ್ ನ ನಮೂದಿಸಿರುವ ಸ್ವತ್ತುಗಳು ಯಾವ ಟೆನ್ಯೂರ‌ ಗೆ ಸೇರಿದ ಸ್ವತ್ತುಗಳು ಎಂಬುದು ನನಗೆ ಈಗ ನೆನಪಿಲ್ಲ.

ಮರಣಶಾಸನ ಪತ್ರದ ಬಿ ಶೆಡ್ಯೂಲ್ ನ ಸ್ವತ್ತುಗಳ ಕಂದಾಯ ದಾಖಲೆಗಳನ್ನು ನಾನು ಪರಿಶೀಲಿಸಿದ್ದೆನು. ನಿಶಾನೆ ಪಿ. 13 ರಲ್ಲಿ ನಮೂದಿಸಿರುವ ದಾನಪತ್ರವನ್ನು ನಾನು ಪರಿಶೀಲಿಸಿರುತ್ತೇನೆ. ದಾನ ಪತ್ರದ ವರ್ಷವನ್ನು ನಿಶಾನೆ ಪಿ. 13 ರಲ್ಲಿ ತಿದ್ದುಪಡಿ ಮಾಡಿ ಸಹಿ ಮಾಡಲಾಗಿರುತ್ತದೆ ಎಂದರೆ ಸರಿ. ನಿಶಾನೆ ಪಿ. 13 ರಲ್ಲಿ ಸಿ ಶೆಡ್ಯೂಲ್ ನ ಸ್ವತ್ತುಗಳಿಗೆ ಸಂಬಂಧಿಸಿದಂತೆ ಹಕ್ಕು ಬಿಡುಗಡೆ ಪತ್ರದ ವರ್ಷವನ್ನು ತಿದ್ದುಪಡಿ ಮಾಡಿ ಸಹಿ ಮಾಡಲಾಗಿರುತ್ತದೆ ಎಂದರೆ ಸರಿ. ಡಿ ಶೆಡ್ಯೂಲ್ ನಲ್ಲಿ 5 ಉಳಿತಾಯ ಖಾತೆಯ ಬ್ಯಾಂಕ್ ನಂಬರ‌ ಗಳನ್ನು ನಮೂದು ಮಾಡಿದ್ದು, ಅವುಗಳಲ್ಲಿ ಇದ್ದ ಹಣವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಉಳಿತಾಯ ಖಾತೆಗಳಿಗೆ ಸಂಬಂಧಿಸಿದಂತೆ ನಾಮೀನಿಯ ಸಂಬಂಧವನ್ನು ಮಾತ್ರ ನಿಶಾನೆ ಪಿ. 13 ರಲ್ಲಿ ನಮೂದಿಸಿದ್ದು, ನಾಮೀನಿಯ ಹೆಸರನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಇ ಶೆಡ್ಯೂಲ್ ಗೆ ಸಂಬಂಧಿಸಿದ ಕಂದಾಯ ದಾಖಲೆಗಳನ್ನು ನಾನು ಪರಿಶೀಲಿಸಿರುತ್ತೇನೆ. ಎಫ್ ಶೆಡ್ಯೂಲ್ ಗೆ ಸಂಬಂಧಿಸಿದ ಸ್ವತ್ತಿನ ವಿವರಗಳನ್ನು ನಿಶಾನೆ ಪಿ. 13 ರಲ್ಲಿ ನಮೂದಿಸಿರುತ್ತೇನೆ.

ನಿಶಾನೆ ಪಿ. 13 ರಲ್ಲಿರುವ ಸಾಕ್ಷಿದಾರರಾದ ಆರ್ ಲತಾ ಮತ್ತು ವೈಲೆಂಟ್‌ವಿಲಿಯಮ್ಸ್ ರವರು ಶ್ರೀಮತಿ ಕೋಡಿಮಣಿಯಂಡ ಬನ್ನಿ ಚಂಗಪ್ಪರವರೊಂದಿಗೆ ನನ್ನ ಕಛೇರಿಗೆ ಬಂದಿದ್ದರು. ನಿಶಾನೆ ಪಿ. 13 ದಾಖಲೆಗೆ ಮೊದಲು ಶ್ರೀಮತಿ ಕೋಡಿಮಣಿಯಂಡ ಬನ್ನಿ ಚಂಗಪ್ಪರವರು ಸಹಿ ಮಾಡಿದ್ದು, ನಂತರ ಸಾಕ್ಷಿದಾರರಾದ ಆರ್ ಲತಾ ಮತ್ತು ವೈಲೆಂಟ್ ವಿಲಿಯಮ್ಸ್ ರವರು ಸಹಿ ಮಾಡಿರುತ್ತಾರೆ. ಶ್ರೀಮತಿ ಕೋಡಿಮಣಿಯಂಡ ಬನ್ನಿ ಚಂಗಪ್ಪರವರು ಸಾಕ್ಷಿದಾರರ ಸಮಕ್ಷಮ ನಿಶಾನೆ ಪಿ. 13 ದಾಖಲೆಗೆ ನನ್ನ ಕಛೇರಿಯಲ್ಲಿ ಸಹಿ ಮಾಡಿರುತ್ತಾರೆ. ನಿಶಾನೆ ಪಿ. 13 ರಲ್ಲಿರುವ ಒಕ್ಕಣೆಯನ್ನು ಶ್ರೀಮತಿ ಕೋಡಿಮಣಿಯಂಡ ಬನ್ನಿ ಚಂಗಪ್ಪರವರು ಸ್ವತಃ ಅವರೇ ಓದಿರುತ್ತಾರೆ. ನಿಶಾನೆ ಪಿ. 13 ದಾಖಲೆಯನ್ನು ದಿಃ 30.03.2013 ರಂದು ನಾನು ತಯಾರಿಸಿದ್ದು, ಶ್ರೀಮತಿ ಕೋಡಿಮಣಿಯಂಡ ಬನ್ನಿ ಚಂಗಪ್ಪರವರು ಮತ್ತು ಸಾಕ್ಷಿದಾರರು ಸದರಿ ದಾಖಲೆಗೆ ನನ್ನ ಕಛೇರಿಯಲ್ಲಿ ಅದೇ ದಿವಸ ಸಹಿ ಮಾಡಿರುತ್ತಾರೆ. ಸಹಿ ಮಾಡಿದ ಸಮಯ ನನಗೀಗ ನೆನಪಿಲ್ಲ. ನಿಶಾನೆ ಪಿ. 13 ದಾಖಲೆಯನ್ನು ದಿಃ 30.05.2013 ರಂದು ನೋಂದಣಿ ಮಾಡಿಸಿರುತ್ತೇನೆ. ಸದರಿ ದಾಖಲೆಯನ್ನು ನಾನೇ ನೋಂದಣಿ ಮಾಡಿಸಿರುತ್ತೇನೆ.ನಿಶಾನೆ ಪಿ. 13 ದಾಖಲೆಯನ್ನು ತಯಾರಿಸಿದ ದಿನವೇ ನೋಂದಣಿ ಮಾಡಿಸದೇ ಇರಲು ಏನು ಕಾರಣ ಎಂಬುದು ನನಗೀಗ ನೆನಪಿಲ್ಲ. ನಿಶಾನೆ ಪಿ. 13 ದಾಖಲೆಯನ್ನು ನೋಂದಣಿ ಮಾಡಿಸುವ ಸಂದರ್ಭದಲ್ಲಿ ಸ್ಟ್ಯಾಲಿನ್ ಜಾನ್ ಮತ್ತು ಜೋಸೆಫ್ ಎಡ್‌ವರ್ಡ್ಸ್ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ನಿಶಾನೆ ಪಿ. 13 ದಾಖಲೆಯನ್ನು ನೋಂದಣಿ ಮಾಡಿಸಲು ಎರಡು ತಿಂಗಳ ಸಮಯವನ್ನು ಏಕೆ ತೆಗೆದುಕೊಂಡಿದ್ದರು ಎಂಬುದು ನನಗೀಗ

ನೆನಪಿಲ್ಲ. ನಿಶಾನೆ ಪಿ. 13 ದಾಖಲೆಯು ಸಂಶಯಾಸ್ಪದದಿಂದ ಕೂಡಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.